ಅಸಲು ದಾವಾ ನಂಃ **53/2016**
ಪಿ.ಡಬ್ಲ್ಯೂಃ -01

**<u>ದಿನಾಂಕಃ 16.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ಶ್ರೀ ಎಂ.ಎಸ್.ವಿ., ಪ್ರತಿವಾದಿ ಪರ ವಕೀಲರಿಂದ</u>**

ನಾನು ಬೊಮ್ಮಯ್ಯ ಮತ್ತು ಅವರ ಹೆಂಡತಿ ಕೆಂಚಮ್ಮ ಇವರನ್ನು ನೋಡಿರುತ್ತೇನೆ. ಬೊಮ್ಮಯ್ಯ ಇವರಿಗೆ ಓದಲು ಮತ್ತು ಬರೆಯಲು ಬರುತ್ತಿತ್ತು. 2004 ನೇ ಇಸವಿಯಲ್ಲಿ ಬೊಮ್ಮಯ್ಯ ನವರಿಗೆ ಅಂದಾಜು ಎಷ್ಟು ವರ್ಷ ವಯಸ್ಸಾಗಿತ್ತು ಅಂತ ನನಗೆ ಹೇಳಲು ಗೊತ್ತಿಲ್ಲ. 2004 ನೇ ಇಸವಿಯಲ್ಲಿ ಸದರಿ ಬೊಮ್ಮಯ್ಯ ನವರ ಆರೋಗ್ಯ ಪರಿಸ್ಥಿತಿ ಹೇಗಿತ್ತು ಅಂತ ಹೇಳಲು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಚೆನ್ನಾಗಿದ್ದರು ಎಂದು ನುಡಿಯುತ್ತಾರೆ. 2004 ನೇ ಇಸವಿಯಲ್ಲಿ ಸದರಿ ಬೊಮ್ಮಯ್ಯ ಇವರಿಗೆ ಪಾರ್ಶ್ವವಾಯು ಹೊಡೆದಿತ್ತು ಎಂದರೆ ಸರಿಯಲ್ಲ. ಅದಕ್ಕೆ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ಸರಿಯಲ್ಲ.

ನಿಪಿಃ 7 ರ ಮೃತ್ಯು ಪತ್ರವನ್ನು ನಾನು ಓದಿರುತ್ತೇನೆ. ನಿಪಿಃ 7 ರ ಮೃತ್ಯು ಪತ್ರದಲ್ಲಿ ಬೊಮ್ಮಯ್ಯನ ವಯಸ್ಸು ಎಷ್ಟು ನಮೂದಾಗಿರುತ್ತದೆ ಅಂತ ಹೇಳಲು ಬರುವುದಿಲ್ಲ. ನಿಪಿಃ 7 ರ ಮೃತ್ಯು ಪತ್ರವು ನನಗೆ 2014 ನೇ ಇಸವಿಯಲ್ಲಿ ಸಿಕ್ಕಿರುತ್ತದೆ. ಮೃತ್ಯು ಪತ್ರ ಇರುವ ಕುರಿತು ನನಗೆ ಆ ಮೊದಲು ಬೇರೆ ಯಾರು ಹೇಳಿರಲಿಲ್ಲ.

2014 ನೇ ಇಸವಿಯಲ್ಲಿ ಬೊಮ್ಮಯ್ಯನ ಹೆಂಡತಿ ಕೆಂಚಮ್ಮ ಜೀವಂತ ಇರಲಿಲ್ಲ. ಓಬಣ್ಣ ತಂದೆ ಪೂಜಾರಿ ಓಬಯ್ಯ ವಾಸಃ ವಾಲ್ಮೀಕಿ ನಗರ ಇವರ ಪರಿಚಯ ಇರುತ್ತದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಗುರುಸಿದ್ದಪ್ಪ .ಪಿ.ಆರ್. ಪತ್ರ ಬರಹಗಾರರ ಪರಿಚಯ ಇರುವುದಿಲ್ಲ.

ನಿಪಿಃ 7 ರ ಮೃತ್ಯು ಪತ್ರ ನನಗೆ ದೊರೆತ ನಂತರ ಸದರಿ ಮೃತ್ಯು ಪತ್ರದ ಪ್ರಕಾರ 2015 ನೇ ಇಸವಿಯಲ್ಲಿ ಕಂದಾಯ ದಾಖಲೆಗಳಲ್ಲಿ ಹೆಸರನ್ನು ಸೇರಿಸಲು ತಹಶೀಲ್ದಾರ್ ಕಚೇರಿಗೆ ಅರ್ಜಿಯನ್ನು ನೀಡಿದ್ದೆ ಎಂದರೆ ಸರಿ. ಸದರಿ ಅರ್ಜಿಯ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು, ಆದರೆ ನಿಖರವಾಗಿ ಹೇಳಲು ಬರುವುದಿಲ್ಲ. ನಾನು ಕೊಟ್ಟಂತಹ ಅರ್ಜಿಗೆ ತಕರಾರು ಬಂದ ಕಾರಣ ಆರ್.ಆರ್.ಟಿ.ಸಿ.ಆರ್. ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ.

ನಾನು ತಹಶೀಲ್ದಾರ್ ಕಚೇರಿಗೆ ಅರ್ಜಿಯನ್ನು ಕೊಟ್ಟ ಕುರಿತು ವಕೀಲರಿಗೆ ತಿಳಿಸಿರುತ್ತೇನೆ. ನಿಪಿಃ 7 ರಲ್ಲಿ ನಮೂದು ಇರುವ ಪಿ. ಶಶಿಧರಪ್ಪ ಬಿನ್ ಪಂಚಾಕ್ಷರಪ್ಪ ಯಾರು ಅಂತ ಗೊತ್ತಿಲ್ಲ.

ನಿಪಿಃ 7 ರಲ್ಲಿ ಸಹಿ ಮಾಡಿರುವಂತೆಯೇ ಬೊಮ್ಮಯ್ಯನವರು ಸಹಿ ಮಾಡುತ್ತಿದ್ದರು ಅಂತ ತೋರಿಸಲು ನಾನು ನ್ಯಾಯಾಲಯಕ್ಕೆ ಬೇರೆ ಏನಾದರೂ ದಾಖಲೆಯನ್ನು ಹಾಜರುಪಡಿಸಿರುತ್ತೀನಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿಃ 7 ನ್ನು ಬೊಮ್ಮಯ್ಯ ಮೃತನಾದ ನಂತರ ಸಾಕ್ಷಿದಾರರೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಅತ್ತೆ ಲಿಂಗಾಯಿತ ಜನಾಂಗಕ್ಕೆ ಸೇರಿದ್ದು, ಪ್ರತಿವಾದಿಯವರು ನಾಯಕ ಜನಾಂಗಕ್ಕೆ ಸೇರಿದ್ದರಿಂದ ನಮಗೂ ಮತ್ತು ಅವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ರಾಮಚಂದ್ರಪ್ಪನವರಿಗೆ ನಿಂಗಮ್ಮ ಎಂಬುವ ಹೆಂಡತಿ ಇದ್ದು ಅವರಿಗೆ 3 ಜನ ಮಕ್ಕಳಿದ್ದು ವಿಲ್ ಪತ್ರವನ್ನು ನನ್ನ ಗಂಡನ ಹೆಸರಿಗೆ ಬರೆಯುವ ಪ್ರಮೇಯವೇ ಇರುವುದಿಲ್ಲ ಎಂದರೆ ಸರಿಯಲ್ಲ. ವಿಲ್ ಪತ್ರವನ್ನು ನನ್ನ ಗಂಡನ ಹೆಸರಿಗೆ ಬರೆಯಲಾಗಿದೆ ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

ದಾವಾ ಆಸ್ತಿಗೆ ಈಗ ಎಷ್ಟ ಮಾರುಕಟ್ಟೆ ಬೆಲೆ ಇರುತ್ತದೆ ಅಂತ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೈಕಿ ಭಾಗಶಃ ಜಮೀನು ರಾಷ್ಟ್ರಿಯ ಹೆದ್ದಾರಿ ಸಲುವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅದರಿಂದ ಬಂದಂತಹ ಪರಿಹಾರದ ಹಣವನ್ನು ಪ್ರತಿವಾದಿಯವರಿಗೆ ನಾನು ತಕರಾರನ್ನು ಸಲ್ಲಿಸಿದ್ದೆ ಎಂದರೆ ಸರಿ. ತಕರಾರನ್ನು ಸಲ್ಲಿಸಲು ಹೋದಾಗ ಪರಿಹಾರದ ಹಣ ಎಷ್ಟು ಬರಬೇಕೆಂದು ನಾನು ವಿಚಾರಿಸಿರುವುದಿಲ್ಲ. ತಕರಾರನ್ನು ಸಲ್ಲಿಸುವ ಸಮಯದಲ್ಲಿ ವಿಲ್ ಪತ್ರ ನನ್ನ ಬಳಿ ಇರಲಿಲ್ಲ. ಆದರೆ ನ್ಯಾಯಾಲಯದಲ್ಲಿತ್ತು. ತಕರಾರನ್ನು ನಾನು 2019 ನೇ ಇಸವಿಯಲ್ಲಿ ಸಲ್ಲಿಸಿರುತ್ತೇನೆ ಆದರೆ ನಿಖರವಾಗಿ ದಿನಾಂಕ ಮತ್ತು ತಿಂಗಳು ಹೇಳಲು ಬರುವುದಿಲ್ಲ.

ರಾಷ್ಟ್ರೀಯ ಹೆದ್ದಾರಿ ಸಲುವಾಗಿ ದಾವಾ ಆಸ್ತಿ ಭಾಗಶಃ ಸ್ವಾಧೀನಗೊಂಡಿರುತ್ತದೆ ಅಂತ ಗೊತ್ತಾದ ಮೇಲೆಯೇ ನಾನು ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಮಾರು 1.5 ಕೋಟಿ ಪರಿಹಾರ ಹಣ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಪರಿಹಾರದ ಹಣವನ್ನು ಲಪಟಾಯಿಸಬೇಕೆಂದು ನಾನು ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಈ ದಾವೆಯಲ್ಲಿ ವಿಲ್ ಪತ್ರದ ಪ್ರಕಾರ ಜಮೀನು ನನಗೆ ಸೇರಬೇಕು ಎಂದು ಪರಿಹಾರ ಕೇಳಿರುತ್ತೇನೆ. ಅದನ್ನು ಬಿಟ್ಟು ಬೇರೇನು ಪರಿಹಾರ ಕೇಳಿಲ್ಲ ಎಂದರೆ ಸರಿ. ನಿಪಿಃ 19 ರಲ್ಲಿ ಸರೋಜಮ್ಮ ಇವರ ಹೆಸರು ಇರುವುದಿಲ್ಲ ಎಂದರೆ ಸಾಕ್ಷಿಯು ಕೇವಲ ನಮ್ಮ ಕುಟುಂಬದ ಪಡಿತರ ಚೀಟಿಯಾಗಿರುತ್ತದೆ ಎಂದು ನುಡಿಯುತ್ತಾರೆ.

**ಅಸಲು ದಾವಾ ನಂಃ 53/2016**
**ಪಿ.ಡಬ್ಲ್ಯೂಃ** -01

ನಿಪಿ ಃ 43 ರಲ್ಲಿ ನಾನು ಮತ್ತು ಸರೋಜಮ್ಮ ಒಂದೇ ಮನೆಯಲ್ಲಿ ಇರುತ್ತೇವೆ ಅಂತ ನಮೂದು ಇರುತ್ತದೆ ಎಂದರೆ ಸರಿ. ಸರೋಜಮ್ಮ ಎಂದಿಗೂ ನನ್ನ ಜೊತೆ ಇರಲಿಲ್ಲ. ಆಕೆಯು ತನ್ನ ಗಂಡನ ಮನೆಯಾದ ದೊಡ್ಡೇರಿ ಗ್ರಾಮದಲ್ಲಿ ವಾಸವಿದ್ದಳು ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂದು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಗಂಡ 4 ನೇ ತರಗತಿ ವರಗೆ ಓದಿರುತ್ತಾನೆ. ನಿಪಿಃ 44 ರಲ್ಲಿ ಪೋಟೋ ಮೇಲಿರುವ ಮತ್ತು ಕೆಳಗಡೆ ಇರುವ ಮುಖ್ಯೋಪಾಧ್ಯಾಯರ ಎರಡು ಸಹಿಗಳು ಬೇರೆ ಬೇರೆ ಇರುತ್ತವೆ ಎಂದರೆ ಸರಿಯಲ್ಲ. ಪೋಟೋ ಮೇಲಿರುವ ಸಹಿಯನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿಃ 44 ಅಪೂರ್ಣವಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.